1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

**ಸತ್ರ ಮೊಕದ್ದಮೆ ನಂಃ 95/2024**

| | | |
|---|---|---|
| ಸಾಕ್ಷಿದಾರರ ಹೆಸರು | - ಆರ್.ಅನಿಲ್ ಕುಮಾರ್ | ಡಿಡಬ್ಲೂ -03 |
| ತಂದೆಯ ಹೆಸರು | - ರಾಜು | |
| ವಯಸ್ಸು | - 44 ವರ್ಷ | |
| ಉದ್ಯೋಗ | - ವಕೀಲರು, ಚಿಕ್ಕಮಗಳೂರು ವಕೀಲರ ಸಂಘದ ಕಾರ್ಯದರ್ಶಿ | |
| ವಾಸ ಸ್ಥಳ | - ಚಿಕ್ಕಮಗಳೂರು | |

(The accused is in judicial custody and today he is produced through video conferencing from District Prison, Chikkamagaluru and before recording the evidence of witness, it is got confirmed from the accused that the voice is clearly audible to him.)

ದಿನಾಂಕಃ 21-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಆರೋಪಿಯ ಪರವಾಗಿ LADCS ನ Deputy Chief Defense counsel ಆದ ಶ್ರೀ ಎನ್ ಡಿ ವಕೀಲರಿಂದಃ**

1. ನಾನು ದಿಃ 29-04-2024 ಇಲ್ಲಿಯವರೆಗೆ ಚಿಕ್ಕಮಗಳೂರು ವಕೀಲರ ಸಂಘದ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 08-05-2024 ರಂದು ಚಿಕ್ಕಮಗಳೂರು ನ್ಯಾಯಾಲಯದ ಸೇವಕರು ಮತ್ತು ಅಟೆಂಡರ್ ಆದ ಕಿರಣ್.ಎಂ.ಡಿ. ಮತ್ತು ಚಂದ್ರಶೇಖರ್.ಡಿ ಎಂಬುವವರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಿಗೆ ಮನವಿಯನ್ನು ಸಲ್ಲಿಸಿ ಪೂರ್ಣೇಶ್ ಎಂಬ ವಕೀಲರು ಕೈಯಲ್ಲಿ ರಾಡನ್ನು ಹಿಡಿದುಕೊಂಡು ಜಿಲ್ಲಾ ನ್ಯಾಯಾಲಯದ ಸಂಕೀರ್ಣದೊಳಗೆ ಪ್ರವೇಶಿಸಿದ ಬಗ್ಗೆ ತಿಳಿಸಿ ಆ ಬಗ್ಗೆ ಕ್ರಮ ಜರುಗಿಸುವಂತೆ ಕೋರಿದ್ದರು. ಆಗ್ಗೆ ನಾನು ಚಿಕ್ಕಮಗಳೂರು ವಕೀಲರ ಸಂಘದ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರಿಂದ ಸದರಿ ಅರ್ಜಿಯ ಮೇಲೆ ನಾನು ಸದರಿ ಪೂರ್ಣೇಶರವರಿಗೆ ಸೂಕ್ತ ಚಿಕಿತ್ಸೆ ನೀಡುವುದರ ಮೂಲಕ ಕ್ರಮ ವಹಿಸುವಂತೆ ಸೂಚಿಸಿ ಆ ಬಗ್ಗೆ ನನ್ನ ಸಹಿಯನ್ನು ಮಾಡಿ ಸೀಲ್ ಅನ್ನು ಹಾಕಿದ್ದೇನು. ಸದರಿ ಮನವಿಯ ದೃಢೀಕೃತ ಪ್ರತಿಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಡಿ.4 ಮತ್ತು ಸಹಿಯನ್ನು ನಿಡಿ.4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಈ ದಿನ ವಿಡಿಯೋ ಕಾನ್ಫರೇನ್ಸಿಂಗ್ ಮುಖಾಂತರ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ</u>

3. ನಿಡಿ.4 ರಲ್ಲಿ ತೋರಿಸಿರುವ ಅರ್ಜಿದಾರರು ನಿಮ್ಮ ಸಂಘಕ್ಕೆ ಸದರಿ ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರನ್ನು ವಿಳಾಸಿಸಿ ಸೂಕ್ತ ಕ್ರಮ ಜರುಗಿಸುವಂತೆ ಕೋರಿ ಸಲ್ಲಿಸಿದ ಮನವಿಯಲ್ಲಿ ನೀವು ಆ ಬಗ್ಗೆ ಸೂಕ್ತ ಕ್ರಮ ಜರುಗಿಸಿ

ಎಂದು ಸೂಚಿಸಲು ನಿಮಗೆ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನೀವು ನಿಡಿ.4 ರಲ್ಲಿ ಕ್ರಮ ವಹಿಸಲು ಸೂಚಿಸಿದ್ದಾಗಿ ಬರೆದು ಸಹಿ ಮಾಡಿ ಸೀಲ್ ಅನ್ನು ಹಾಕಿದ್ದಾಗಿ ಹೇಳಿದ್ದೀರಿ ಆದರೆ ಆ ರೀತಿ ಸೂಚಿಸಿರುವುದು ಯಾವ ದಿನಾಂಕದಂದು ಎಂದು ನಮೂದಿಸಿಲ್ಲ ಎಂದರೆ ಸಾಕ್ಷಿ ಸೂಚಿಸಿಲ್ಲ, ಆದರೆ ಮನವಿಯಲ್ಲೇ ದಿನಾಂಕವನ್ನು ನಮೂದಿಸಲಾಗಿದೆ ಎನ್ನುತ್ತಾರೆ. ಸದರಿ ಮನವಿಯ ಮೇರೆಗೆ ಯಾವ ಕ್ರಮವನ್ನು ಜರುಗಿಸಲಾಯಿತು ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿ ವಕೀಲನಾಗಿರುವ ಕಾರಣ ಆತನಿಗೆ ಸಹಾಯ ಮಾಡಲು ನಿಡಿ.4 ರಂತೆ ಸುಳ್ಳು ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ